ಗಂಡ ಹೆಂಡತಿ ನಡುವೆ ದೊಡ್ಡ ಜಗಳ ನಡೆದು, ಗಂಡ ಮನೆ ಬಿಟ್ಟು ಹೋದ. ಹೆಂಡತಿ ಕರೆ ಮಾಡಿ ಮನೆಗೆ ಬರುವುದಕ್ಕೆ ಬೇಡಿಕೊಂಡಳು.
ಗಂಡ: ನಿನ್ನ ಪಕ್ಕದಲ್ಲೇನಿದೆ?
ಹೆಂಡತಿ: ಗಾಜಿನ ಲೋಟ.
ಗಂಡ: ಅದನ್ನು ಜೋರಾಗಿ ಎತ್ತಿ ಹಾಕಿದರೆ ಏನಾಗುತ್ತದೆ?
ಹೆಂಡತಿ: ಒಡೆದು ಹೋಗುತ್ತದೆ.
ಗಂಡ: ಒಡೆದು ಗಾಜಿನ ಲೋಟದ ಚೂರುಗಳನ್ನು ಸೇರಿಸಿ ಮತ್ತೆ ಮೊದಲಿನಂತೆ ಮಾಡಲು ಆಗುತ್ತಾ? ಇಲ್ಲ ತಾನೇ ಹಾಗೆಯೇ ನನ್ನ ಮನಸ್ಸು ಒಡೆದು ಹೋಗಿದೆ. ಮತ್ತೆ ಸೇರಿಸೋಕೆ ಆಗಲ್ಲ, ಅಂದರೆ ವಾಪಸ್ ಮನೆಗೆ ಬರಕ್ಕಾಗಲ್ಲ.
ಹೆಂಡತಿ: ಸರಿ ಬಿಡಿ, ಹೊಸ ಲೋಟ ತರ್ತೀನಿ.

ಹೆಂಡತಿ ತರಕಾರಿ ಹೆಚ್ಚುತ್ತಾ ಕುಳಿತಿದ್ದಳು. ಪಕ್ಕದಲ್ಲಿದ್ದ ಗಂಡ, ಟೀವಿಯಲ್ಲಿ ರೊಮ್ಯಾನ್ಸ್ ಸಾಂಗ್ ನೋಡಿ ಖುಷಿ ಪಡುತ್ತಿದ್ದ.
ಹೆಂಡತಿ: ಟೀವಿಯಲ್ಲಿ ಹೀರೊ, ಹೀರೋಯಿನ್ ರೊಮ್ಯಾನ್ಸ್ ಸಾಂಗ್ ನೋಡಿ ಖುಷಿ ಪಡುವ ಬದಲು ನನ್ನ ಜೊತೆಯೂ ರೊಮ್ಯಾನ್ಸ್ ಸಾಂಗ್ ಹಾಡಬಹುದಪ್ಪ.
ಗಂಡ: ರೊಮ್ಯಾನ್ಸ್ ಸಾಂಗ್ ಮಾಡುವುದಕ್ಕೆ ಅವರಿಗೆ ದುಡ್ಡು ಕೊಡುತ್ತಾರೆ. ನೀನೇನಾದ್ರೂ ಕೊಡ್ತಿಯೇನು?

ಹೆಂಡತಿ: ಡುಮ್ಮು ಕಟ್‌ಕೊಂಡ ಹೆಂಡತಿ ಹಾಗೂ ಹೆಲ್ಮೆಟ್ ಎರಡು ಒಂದೇ ನೋಡು.
ಗಂಡ: ಅದೆಂಗೆ ಹೇಳುತ್ತೀಯಾ?
ಹೆಂಡತಿ: ಎರಡನ್ನು ತಲೆ ಮೇಲೆ ಇಟ್ಟುಕೊಳ್ಳದಿದ್ದರೆ ನಿನ್ನ ಜೀವಕ್ಕೆ ಅಪಾಯ.

ಹೆಂಡತಿ: ಅಲ್ಲಾರಿ, ಗಂಡಸರು ಬೇಗ ಸತ್ರೆ ಸ್ವರ್ಗದಲ್ಲಿ ಅಪ್ಸರೆಯರು ಸಿಗ್ತಾರಂತೆ ಹೌದಾ?
ಗಂಡ: ಹೌದು ಕಣೇ...
ಹೆಂಡತಿ: ಮತ್ತೆ ಹೆಂಡತಿ ಬೇಗ ಸತ್ರೆ?
ಗಂಡ: ಮಂಗ ಸಿಗುತ್ತೆ.
ಹೆಂಡತಿ: ಇದೇನು ಅನ್ಯಾಯ? ನಿಮಗೆ ಮಾತ್ರ ಇಲ್ಲೂ ಅಪ್ಸರೆ, ಅಲ್ಲೂ ಅಪ್ಸರೆ. ನಮಗೆ ಇಲ್ಲೂ ಮಂಗ, ಅಲ್ಲೂ ಮಂಗನಾ?

ಟೀಚರ್: ವಿದ್ಯಾರ್ಥಿಗಳೇ, ನಿಮ್ಮ ಹೆಸರು, ಅಭ್ಯಾಸಗಳು ಏನು ಅಂತಾ ಹೇಳಿ?
ಎಲ್ಲರೂ ಅವರವರ ಹೆಸರು ಹೇಳಿ, ಎಲ್ಲರೂ ತಮ್ಮ ತಮ್ಮ ಅಭ್ಯಾಸ 'ಚಂದ್ರ' ನೋಡುವುದು ಅಂತ ಹೇಳಿದರು.
ಟೀಚರ್: ಹೌದಾ? ಎಲ್ಲರ ಅಭ್ಯಾಸ ಒಂದೇ ತರಹ ಇದೆ. ಈಗ ಹುಡುಗಿಯರನ್ನು ಕೇಳೋಣ.
ಮೊದಲ ಹುಡುಗಿ: ನನ್ನ ಹೆಸರು 'ಚಂದ್ರ'.
ಅದನ್ನು ಕೇಳಿ ಟೀಚರ್ ಶಾಕ್, ಹುಡುಗರು ರಾಕ್..

ಹೆಂಡತಿ: ಪುರೋಹಿತರೆ, ನನ್ನ ಗಂಡ ಈ ಪಾಟಿ ಕುಡಿದು ಜಗಳ ಆಡ್ತಿರ್ತಾನೆ. ನೀವು ಜಾತಕ ಸರಿಯಾಗಿ ನೋಡಿರಲಿಲ್ವಾ?
ಪುರೋಹಿತರು: ಜಾತಕ ನೋಡಿ ಅವರಿಗೆ 'ಕುಜ ದೋಷ' ಇದೆ ಅಂತ ಹೇಳಿದ್ದಲ್ಲ.
ಹೆಂಡತಿ: 'ಕುಜ ದೋಷ' ಅಂದ್ರೆ?
ಪುರೋಹಿತರು: ಕುಡಿದು ಜಗಳ ಆಡೋ ದೋಷ.

ಮಗ: ಅಮ್ಮ ಎಲ್ಲಿಗೆ ಹೋಗ್ತಾ ಇದೀಯಾ?
ಅಮ್ಮ: ಬಟ್ಟೆ ತರಲು.
ಮಗ: ನಾನು ಬರುತ್ತೇನೆ.
ಅಮ್ಮ: ಬಾ. ಮಳೆ ಬರುವ ಹಾಗಿದೆ, ಟೆರೇಸ್ ಮೇಲೆ ಒಣಹಾಕಿರುವ ಬಟ್ಟೆ ತರೋಣ.
ಮಗ: ಚೂರು ಕೆಲಸ ಇದೆ. ನೀನೇ ಹೋಗಿ ಬಾ ಅಮ್ಮ.

ಒಬ್ಬ ಚಿಕ್ಕ ಹುಡುಗ ತನ್ನ ಸೈಕಲ್ ಅನ್ನು ಪಾರ್ಲಿಮೆಂಟ್ ಭವನದ ಹತ್ತಿರ ನಿಲ್ಲಿಸಿ ತಿರುಗಾಡುತ್ತಿದ್ದ.
ಪೊಲೀಸ್ ಕಾನ್‌ಸ್ಟೇಬಲ್: ನಿನ್ನ ಸೈಕಲ್ ಅನ್ನು ಇಲ್ಲಿ ಏಕೆ ನಿಲ್ಲಿಸಿದ್ದೀಯಾ? ಇಲ್ಲಿ ಸಂಸದರು, ಕೆಲ ರಾಜ್ಯಗಳ ಮುಖ್ಯಮಂತ್ರಿಗಳು ಹಾಗೂ ರಾಜಕೀಯ ನಾಯಕರು ಸುತ್ತಾಡುತ್ತಾರೆ. ಇಲ್ಲಿ ನಿಲ್ಲಬೇಡ ಮುಂದೆ ಹೋಗು.
ಹುಡುಗ: ನೀವೇನೂ ಹೆದರಬೇಡಿ ಪೊಲೀಸ್ ಅಂಕಲ್, ನಾನು ನನ್ನ ಸೈಕಲ್‌ಗೆ ಬೀಗ ಹಾಕಿದ್ದೇನೆ.







ಮೇಷ್ಟ್ರು: ಸಂಸ್ಕೃತದಲ್ಲಿ ಹೆಂಡತಿಗೆ ಏನು ಅಂತಾರೆ?
ಗುಂಡ: ಸರ್, ಸಂಸ್ಕೃತ ಅಲ್ಲಾ ಪ್ರಪಂಚದ ಯಾವುದೇ ಭಾಷೆಯಲ್ಲೂ ಹೆಂಡತಿಗೆ ಏನೂ ಅನ್ನಂಗಿಲ್ಲ.

ಮದುವೆಯಾದ ಹೊಸದರಲ್ಲಿ 'ಮಧುಚಂದ್ರ'
2 ವರ್ಷಗಳ ನಂತರ 'ತರಕಾರಿ ತಂದ್ರಾ?'
4 ವರ್ಷಗಳ ನಂತರ 'ಮಕ್ಕಳನ್ನು ಶಾಲೆಗೆ ಬಿಟ್ಟು ಬಂದ್ರಾ?'
16 ವರ್ಷಗಳ ನಂತರ 'ಮನೆಗೆ ಬಂದ್ರಾ'
36 ವರ್ಷಗಳ ನಂತರ 'ಮಾತ್ರೆ ತಗೊಂಡ್ರಾ?'

ಸಂಗ್ರಹ: ಭಾರತೀ ಗಂಗಾಧರ್, ಬೆಂಗಳೂರು